# ಕರ್ನಾಟಕ ಸರ್ಕಾರ

ಸಂ: ಗ್ರಾಅಪ 21 ಗ್ರಾನೀಸ(4)2015

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:19.02.2015.

## ಸುತ್ತೋಲೆ

ವಿಷಯ: ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ(O&M) ಅನುದಾನದ ಸಮರ್ಪಕವಾಗಿ ನಿರ್ವಹಣೆ ಮಾಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 12 ಗ್ರಾನೀಸ (4) 2011(ಪಿ) ದಿನಾಂಕ: 12.03.2013.
2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 05 ಗ್ರಾನೀಸ (2) 2013 ದಿನಾಂಕ: 3/4.07.2013.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 44 ಗ್ರಾನೀಸ (2) 2014 ದಿನಾಂಕ:27.06.2014.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 44 ಗ್ರಾನೀಸ (2) 2014 ದಿನಾಂಕ: 20.12.2014.

–

1. ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ನೀತಿಯನ್ನು ರೂಪಿಸಿ ಉಲ್ಲೇಖ(1)ರಲ್ಲಿ ಸರ್ಕಾರದ ಆದೇಶ ಹೊರಡಿಸಲಾಗಿದೆ. ಅದರನ್ವಯ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ O&M ಅನುದಾನವನ್ನು ಬಳಕೆ ಮಾಡಬೇಕಾಗಿದೆ ಹಾಗೂ ನೀರಿನ ಕರ ವಸೂಲಿ ಮಾಡಲು ಪಂಚಾಯತ್ ರಾಜ್ ಸಂಸ್ಥೆಗಳು ಕ್ರಮ ವಹಿಸಬೇಕಾಗಿದೆ. ಈ ಸಂಬಂಧ ವಹಿಸಬೇಕಾದ ಕ್ರಮಗಳ ಕುರಿತು ಉಲ್ಲೇಖ(2)ರ ಸರ್ಕಾರದ ಸುತ್ತೋಲೆಯಲ್ಲಿ ಸ್ಪಷ್ಟ ನಿರ್ದೇಶನ ನೀಡಲಾಗಿದೆ.

2. ಈಗಾಗಲೇ ಉಲ್ಲೇಖ (2)ರ ಸುತ್ತೋಲೆ ಆದೇಶದ ಅಂಶ:8ರಲ್ಲಿ ತಿಳಿಸಲಾದ ರೀತ್ಯ ಪ್ರತಿ ಗ್ರಾಮ ಪಂಚಾಯತಿಯು **ಪ್ರತ್ಯೇಕ O&M ಖಾತೆ ತೆರೆದು ಅದರಲ್ಲಿ ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆ(NRDWP-O&M) (ಕಾರ್ಯಾಚರಣೆ ಮತ್ತು ನಿರ್ವಹಣೆ) ಅನುದಾನ ಪ್ರತ್ಯೇಕವಾಗಿ ಜಮೆಯಾಗಬೇಕು ಮತ್ತು ನೀರಿನ ಕರ ವಸೂಲಿಯನ್ನು ಸಹ ಈ O&M ಖಾತೆಗೆ ಜಮೆ ಮಾಡಬೇಕು.** ಆಗ ಮಾತ್ರ ಇದರ ಸಮರ್ಪಕ ಲೆಕ್ಕ ನಿರ್ವಹಣೆ ಮತ್ತು ಹೊಂದಾಣಿಕೆ ಶಿಸ್ತಿನಿಂದ ಮಾಡಲು ಸಾಧ್ಯವಾಗಲಿದೆ. ಈ ಮಾಹಿತಿಯನ್ನು ಆಯಾ ತಾಲ್ಲೂಕು ಪಂಚಾಯಿತಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯಿತಿ (GPs)ಗಳಿಗೆ ಮನವರಿಕೆ ಮಾಡಿ ಖಾತೆ ತೆರೆಸಲು ತಿಳಿಸಿದೆ. ಸದರಿ **O&M** ಅನುದಾನವನ್ನು ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ **(O&M)** ಸಲುವಾಗಿ ಅಂದರೆ (i) ಸ್ಥಾವರಗಳ ನಿರ್ವಹಣೆ, ಸಣ್ಣ ಪ್ರಮಾಣದ ದುರಸ್ತಿ ಕಾರ್ಯಗಳಿಗೆ (ii) ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಂದ ಸರಬರಾಜಾಗುವ ಸಗಟು ನೀರು ಪೂರೈಕೆಗೆ ನೀಡುವ ಬಿಲ್ಲುಗಳನ್ನು ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ (DWSM) ಖಾತೆಗೆ ಪಾವತಿಸಲು ಉಪಯೋಗಿಸತಕ್ಕದ್ದು.

(iii) ಇದನ್ನು ಹೊರತುಪಡಿಸಿ ಈ ಅನುದಾನವನ್ನು ಯಾವುದೇ ಕಾರಣಕ್ಕೂ ಮಾರ್ಗಪಲ್ಲಟ ಮಾಡತಕ್ಕದ್ದಲ್ಲ. ಅನುದಾನ ಬಳಕೆಯ ವಿವರಗಳನ್ನು ಉಲ್ಲೇಖ (2)ರ ಸುತ್ತೋಲೆ ಪ್ರಕಾರ ಗ್ರಾಮ ಪಂಚಾಯತ್‌ನ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯತಕ್ಕದ್ದು ಹಾಗೂ ಈ ಅನುದಾನದ ಬಳಕೆ ಸಂಬಂಧ ಪ್ರತ್ಯೇಕ ನಗದು ಪುಸ್ತಕವನ್ನು ನಿರ್ವಹಣೆ ಮಾಡಿ, ಗ್ರಾಮ ಪಂಚಾಯತ್‌ನ ಆಡಿಟ್‌ಗೆ ಮತ್ತು ಜಮಾಬಂದಿ ಸಮಯದಲ್ಲಿ ಕಡ್ಡಾಯವಾಗಿ ಒದಗಿಸತಕ್ಕದ್ದು. ಅನುದಾನ ವಿನಿಯೋಗದ ಹಾಗೂ ನೀರಿನ ಕರ ವಸೂಲಿಯ ವಿವರಗಳನ್ನು ಭಾರತ ಸರ್ಕಾರದ **IMIS** ಹಾಗೂ ಗಾಂಧಿ ಸಾಕ್ಷಿ ಕಾಯಕ **(GSK)**ದಲ್ಲಿ ಕಾಲಕಾಲಕ್ಕೆ ಇಂಧೀಕರಿಸಬೇಕು. ಇದರ ಸಂಪೂರ್ಣ ಮೇಲುಸ್ತುವಾರಿ ಮಾಡುವುದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

19.2.15

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ(ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
ಇಮೇಲ್: **rk3452000@gmail.com**
**ಫೋನ್:22032806, ಫ್ಯಾಕ್ಸ್:22203175**

**ಪ್ರತಿಯನ್ನು:**

1. ರಾಜ್ಯ ಎಲ್ಲಾ **(30)** ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, 1ನೇ ಮಹಡಿ, ಕಾವೇರಿ ಭವನ, ಕೆಹೆಚ್‌ಬಿ ಕಾಂಪ್ಲೆಕ್ಸ್, **ಬೆಂಗಳೂರು-09**.
3. ರಾಜ್ಯದ ಎಲ್ಲಾ **(4)** ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳು.
4. ರಾಜ್ಯದ ಎಲ್ಲಾ **(38)** ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು.
5. ರಾಜ್ಯದ ಎಲ್ಲಾ **(176)** ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳು.